ಪಾಟಿ ಬಟ್ಟೆ ಒಗೆಯುತ್ತಾಳೆ ಅಂತ ನೀವೇನಾದರೂ ಅಂದುಕೊಂಡು ಆಕೆ ಏನಾದರೂ ಡೋಬಿ ಗೀಬಿ ಕೆಲಸ ಮಾಡುತ್ತಿದ್ದಾಳೆ ಅಂತ ಅನ್ಯಥಾ ಭಾವಿಸಬಾರದು. ಈ ಮಳೆ ಎಷ್ಟೆಲ್ಲ ಮಾಡಿ ಹಾಕಿತು? ಮಳೆ ಬಂದು ಹೊರಗೆ ಏನೋ ಆದಾಗ ಒಳಗೂ ಇನ್ನೇನೋ ಆಗಿದೆ ಅಂತ ನಿಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಗೊತ್ತಿಲ್ಲದಿದ್ದರೆ ಕೇಳಿ...

ಕಮಲಕ್ಕ ಅಂದರೆ ನಿಮ್ಮಲ್ಲಿ ಕೆಲವರಿಗಾದರೂ ಗೊತ್ತಿರಬಹುದು. ಕೆಳಮನೆ ಮಾದಪ್ಪ ಗೌಡರ ಸೊಸೆ. ದಾಸಪ್ಪನ ಹೆಂಡತಿ. ಮಾದಪ್ಪ ಗೌಡರ ಇಬ್ಬರು ಗಂಡುಮಕ್ಕಳಲ್ಲಿ ಮೊದಲನೆಯವ ದಾಸಪ್ಪ, ಎರಡನೆಯವ ಶೀನಪ್ಪ. ಕೃಷಿ ಕುಟುಂಬ, ಎಕರೆಗಟ್ಟಲೆ ತೋಟ.

ಮೊದಲೆಲ್ಲಾ ಗೌಡರದ್ದೇ ಕಾರುಬಾರು. ಒಳ್ಳೆ

